ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 143-148
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಜನಪದ ಸಾಹಿತ್ಯದಲ್ಲಿ ಚಿತ್ರದುರ್ಗದ ಚರಿತ್ರೆ : ದೊಡ್ಡೇರಿ ಲಡಾಯಿ ಲಾವಣಿ

**ಡಾ. ವಿಜಯ ಕುಮಾರ್ ಹೆಚ್. ಜಿ**
ಸಹಾಯಕ ಪ್ರಾಧ್ಯಾಪಕ, ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

***Abstract:***
*ಸಾಹಿತ್ಯ, ಚರಿತ್ರೆ, ಮಾನವಿಕಶಾಸ್ತ್ರ, ಸಮಾಜಶಾಸ್ತ್ರ ಹಾಗೂ ಸಾಂಸ್ಕೃತಿಕ ಅಧ್ಯಯನಗಳ ತಾಯಿ ಬೇರು ಜಾನಪದ. ಮಾನವನ ವಿಕಾಸ ಮಾನವಶಾಸ್ತ್ರ, ಮಾನವನ ಆಡಳಿತದ ರೀತಿ ನೀತಿಗಳು ಇತಿಹಾಸ, ಮಾನವ ಸಂಘಜೀವಿ ಸಮಾಜಜೀವಿಯಾಗಿದ್ದು ಸಮಾಜಶಾಸ್ತ್ರ, ಮಾನವನ ನಡಾವಳಿಗಳೇ ಸಂಸ್ಕೃತಿ. ಈ ಎಲ್ಲಾವುಗಳ ಪಳೆಯುಳಿಕೆಗಳೇ ಜಾನಪದ. ಇವೆಲ್ಲಾ ಕ್ಷೇತ್ರಗಳು ಒಂದಕ್ಕೊಂದು ಪೂರಕವಾಗಿವೆ. ಹಾಗೇ ಜಾನಪದ ಮತ್ತು ಇತಿಹಾಸವು ಕೂಡ ಒಂದಕ್ಕೊಂದು ಕೊಡುಕೊಳ್ಳುವಿಕೆಯ ಭಾಗವಾಗಿಯೇ ಬಂದಿದೆ ಎಂಬುದು ಸಹ ಗಮನಾರ್ಹ. ನಮ್ಮ ನಾಡನ್ನು ನೂರಾರು ರಾಜ–ಮಹಾರಾಜರು ಆಳಿ ಹೋಗಿದ್ದಾರೆ. ಆಯಾ ಕಾಲದ ರಾಜರು ಹಾಕಿಸಿದ ಶಾಸನ. ಕಟ್ಟಿಸಿದ ದೇವಾಲಯ, ಕೋಟೆ ಕೊತ್ತಲುಗಳು, ಗಿರಿದುರ್ಗಗಳು ಕೆರೆ–ಬಾವಿಗಳು ಆ ಕಾಲದ ಇತಿಹಾಸದ ಪುನರಚನೆಯ ಸಾಮಗ್ರಿಯಾಗುತ್ತವೆ. ಹಾಗೆಯೇ ಇವುಗಳಿಗೆ ಸಂಬಂಧಿಸಿ ಹುಟ್ಟಿದ ಕತೆಗಳು ಆ ಕಾಲದ, ಜನರ ಬದುಕಿನ ಅಂಗವೂ ಆಗಿರುವುದರಿಂದ ಅವು ಜಾನಪದವು ಆಗಿರುತ್ತವೆ.*

***Keywords:*** *ಕನ್ನಡ ಸಾಹಿತ್ಯ, ಜಾನಪದ, ಜನಪದ, ಮಾನವಿಕ ವಿಜ್ಞಾನ, ಇತಿಹಾಸ.*

## ಪೀಠಿಕೆ

ಇತಿಹಾಸ ಎನ್ನುವುದನ್ನು ಸೀಮಿತ ಅರ್ಥದಲ್ಲಿ ತೆಗೆದುಕೊಂಡಾಗ ಅದು ಮಾನವನ ಆಡಳಿತ ರೀತಿ–ನೀತಿಗಳ ದಾಖಲೆಯಾಗಿ ಮಾತ್ರ ಕಾಣಿಸಿಕೊಳ್ಳುತ್ತದೆ. ಆಯಾ ಕಾಲದ ಆಡಳಿತ ಕ್ರಮ. ತೆರಿಗೆಯ ರೀತಿ, ರಾಜರ ವಂಶಾವಳಿಗಳು ಯುದ್ಧಗಳು, ಸಿಂಹಾಸನಾರೋಹಣ ಇತ್ಯಾದಿಗಳನ್ನು ಪಟ್ಟಿ ಮಾಡುವುದಾದರೆ ಇತಿಹಾಸದ ವ್ಯಾಪ್ತಿ ಸೀಮಿತವಾಗುತ್ತದೆ. ಆದ್ದರಿಂದ ಇತಿಹಾಸ ರಚನೆಗೆ ಶಾಸನಗಳು, ಲಿಖಿತ ಸಾಹಿತ್ಯ ಕೃತಿಗಳು, ಕಡತಗಳು, ದಾಖಲೆಗಳು, ಪ್ರವಾಸಿಗರ ರಚನೆಗಳು, ನಾಣ್ಯಗಳು ಮುಂತಾದವುಗಳನ್ನು ಬಳಸಿಕೊಳ್ಳುತ್ತಿದ್ದರು. ಇಂಥ ಇತಿಹಾಸ ರಚನೆಗಳಲ್ಲಿ ಶಿಷ್ಟ ಸಮಾಜದ ಜೀವನ ಕ್ರಮಗಳು ಮಾತ್ರ ಲಭ್ಯವಾಗುತ್ತವೆ. ಇತಿಹಾಸ ರಚನೆಗೆ ಮುಖ್ಯ ಆಕರಗಳಾದ ಶಾಸನಗಳು, ನಾಣ್ಯಗಳು ಆಳುವ ವರ್ಗಗಳ ಪರವಾಗಿದ್ದವು ಎಂಬುವುದಂತು ಸ್ಪಷ್ಟ. ಹೀಗಾಗಿ ಅವು ಆಳುವವರ ಭಾವನೆಗಳನ್ನೇ ಬಿಂಬಿಸುತ್ತವೆ. ರಾಜರು ಯುದ್ಧಗಳಲ್ಲಿ ಪಡೆದ ವಿಜಯ. ಅವರ ವೈಭವ, ರಾಜರ ನಡುವಣ ಒಪ್ಪಂದಗಳು, ದಾನಗಳು ಪ್ರಶಂಸೆ, ಆಡಳಿತ ವೈಖರಿ, ತೆರಿಗೆಗಳು ಮುಂತಾದ ವಿಷಯಗಳನ್ನು ಇವು ಒಳಗೊಂಡಿರುತ್ತವೆ. ಆದ್ದರಿಂದ ಇತಿಹಾಸ ಸಮಾಜದ ಒಂದು ಮುಖವನ್ನು ಮಾತ್ರ ಪ್ರತಿಬಿಂಬಿಸುತ್ತದೆ. ಭಾರತದ ಸಾಂಪ್ರದಾಯಿಕ ಇತಿಹಾಸಕಾರರು ಮೌಖಿಕ ಪರಂಪರೆಯನ್ನು ಕಡೆಗಣಿಸಿದ ಕಾರಣದಿಂದ

***Please cite this article as:*** ವಿಜಯ ಕುಮಾರ್ ಹೆಚ್. ಜಿ. (2025). ಜನಪದ ಸಾಹಿತ್ಯದಲ್ಲಿ ಚಿತ್ರದುರ್ಗದ ಚರಿತ್ರೆ : ದೊಡ್ಡೇರಿ ಲಡಾಯಿ ಲಾವಣಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(6), 143–148

ಭಾರತದ ಇತಿಹಾಸ ನಿರೂಪಣೆಯಲ್ಲಿ ಇಂದಿಗೂ ಲೋಪಗಳನ್ನೆ ಕಾಣುತ್ತಿದ್ದೇವೆ.

ಇಂದು ಇತಿಹಾಸಕಾರರಾದಿಯಾಗಿ ವಿವಿಧ ಮಾನವಿಕ ಶಾಸ್ತ್ರಗಳ ಅಧ್ಯಯನದಲ್ಲಿ ತೊಡಗಿಕೊಂಡಿರುವ ವಿದ್ವಾಂಸರು ಮಾನವನ ಸಾಂಸ್ಕೃತಿಕ ಇತಿಹಾಸದ ಕಡೆಗೆ ಗಮನ ಹರಿಸಿದ್ದಾರೆ. ಸಾಂಸ್ಕೃತಿಕ ಇತಿಹಾಸವೆಂದರೆ ಅದು ಲಿಖಿತ ಹಾಗೂ ಮೌಖಿಕ ರೂಪದಲ್ಲಿ ವಿಕಾಸ ಹೊಂದಿದ ಮಾನವನ ಬದುಕಿನ ಕ್ರಮಗಳ ನಿರೂಪಣೆಯಾಗಿರುತ್ತದೆ. ಅದು ಪರಂಪರಾಗತ ಇತಿಹಾಸ. ಅದರಲ್ಲಿ ಜಾನಪದವನ್ನು ಮೌಖಿಕ ರೂಪದ ಸಾಂಸ್ಕೃತಿಕ ಇತಿಹಾಸವೆನ್ನಬಹುದು.

ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಮೌಖಿಕ ಪರಂಪರೆ ಎನ್ನುವುದು ಇದ್ದೇ ಇರುತ್ತದೆ. ಲಿಖಿತ ಪರಂಪರೆ ಆಳುವ ವರ್ಗದ ಪರವಾಗಿದ್ದರೆ, ಜನಪರವಾದ ಸಾಂಸ್ಕೃತಿಕ ದಾಖಲೆಗಳು ಮೌಖಿಕ ಸಾಹಿತ್ಯದಲ್ಲಿ ಸಿಕ್ಕುವ ಸಾಧ್ಯತೆಯೇ ಹೆಚ್ಚು. ಆದ್ದರಿಂದ ಸಾಂಸ್ಕೃತಿಕ ಪರಂಪರೆಯ ಜನಪದ ಧೋರಣೆಗಳನ್ನು ಮೌಖಿಕ ಪರಂಪರೆ ಸಶಕ್ತವಾಗಿ ಹಿಡಿದಿಡುತ್ತದೆ. ಒಂದು ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವಾಗ ತುಂಬಾ ಉಪಯುಕ್ತ ಮಾಹಿತಿಯನ್ನು ಒದಗಿಸುವ ಜನಪದ ಸಾಮಗ್ರಿಗಳೆಂದರೆ 'ವೀರಕಾವ್ಯಗಳು', 'ಐತಿಹ್ಯಗಳು', 'ಲಾವಣಿಗಳು', 'ಸಂಪ್ರದಾಯಗಳು', 'ಆಚಾರಗಳು' ಮುಂತಾದವುಗಳಾಗಿವೆ. ಲಿಖಿತ ಮಾಧ್ಯಮಗಳು ಮೌಖಿಕ ಮಾಧ್ಯಮಗಳು ಮತ್ತು ಪ್ರತಿಪಾದಿಸುವ ವಿಷಯಗಳಿಗೂ ಅನೇಕ ಸಂದರ್ಭಗಳಲ್ಲಿ ಅಂತರವಿರುತ್ತದೆ. ಆದ್ದರಿಂದ ಇವುಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿ ಸತ್ಯಾಂಶಗಳನ್ನು ಮಾತ್ರ ನಿರೂಪಿಸುವುದು ಸಂಶೋಧಕರ ಕರ್ತವ್ಯವಾಗಿರುತ್ತದೆ.

ಜಾನಪದ ಕೆಲವು ಸಂದರ್ಭಗಳಲ್ಲಿ ಇತಿಹಾಸ ರಚನೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಅಂದರೆ ಒಬ್ಬರಾಜ ಹಾಕಿಸಿದ ಶಾಸನವನ್ನು ಅಥವಾ ಸ್ಮಾರಕವನ್ನು ಇನ್ನೊಬ್ಬರಾಜ ಆಳಿಸಿ ಹಾಕಿದಾಗ ಆ ಘಟನೆ ಜನ ಸಾಮಾನ್ಯರನ್ನು ಸೇರಿ ಕ್ರಮೇಣ ಕಥೆಯಾಗಿಯೋ, ಗೀತೆಯಾಗಿಯೋ ಹರಿದು ಬರುತ್ತದೆ. ಇಂತಹ ಸಾಹಿತ್ಯವು ಚರಿತ್ರೆಯ ಪುನರ್‌ನಿರ್ಮಾಣದಲ್ಲಿ ಸಹಾಯಕವಾಗಬಲ್ಲವು. ಚರಿತ್ರೆಯ ಎಲ್ಲಾ ಘಟನೆಗಳು ಜನಪದರಲ್ಲಿ ಉಳಿದು ಬರುತ್ತವೆ ಎಂದು ಹೇಳಲಾಗದು. ಆದರೆ ರಾಜರು ಜನಜೀವನವನ್ನು ಕಲಕಿದ ವಿಶೇಷ ಸಂದರ್ಭಗಳು, ದುರಂತ ಘಟನೆಗಳು, ಪ್ರಣಯ ಪ್ರಸಂಗಗಳು, ಧಾರ್ಮಿಕ ಘರ್ಷಣೆಗಳು, ಜನವಿರೋಧಿ ಆಡಳಿತಗಳು ಇಂಥ ವಿಶೇಷ ಘಟನೆಗಳು ಜನಮಾನಸದಲ್ಲಿ ಉಳಿದು ಜನಪದ ಕಥೆ, ಗೀತೆಗಳಲ್ಲಿ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಸಮಕಾಲೀನ ಘಟನೆಗಳನ್ನು ಸೇರಿಸಿಕೊಳ್ಳುತ್ತಾ ಕಂಠಸ್ಥವಾಗಿ ಮುಂದುವರೆಯುತ್ತವೆ. ಉದಾ–ಕರಿಭಂಟನ ಕಾಳಗ (ಗಂಗರಕಾಲ) ಲಕ್ಕಣ್ಣ–ಈರಣ್ಣರ ಲಾವಣಿ (ಮೊದಲನೆಯ ವಿಷ್ಣುವರ್ಧನ ಕಾಲ) ಕೆಂಪೇಗೌಡ, ಕುಮಾರರಾಮ, ಪಿರಿಯಾಪಟ್ಟಣದ ಕಾಳಗ, ಟಿಪ್ಪುಸುಲ್ತಾನ, ಚಿತ್ರದುರ್ಗದ ಮದಕರಿ ನಾಯಕ, ಸ್ವತಂತ್ರ ಹೋರಾಟದ ಸಂದರ್ಭದಲ್ಲಿ ಕಿತ್ತೂರು ರಾಣಿಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಹಲಗಲಿಯ ಬೇಡರು, ತರೀಕೆರೆ ಸರ್ಜಾನಾಯಕ ಮುಂತಾದವರ ಐತಿಹಾಸಿಕ ಘಟನೆಗಳು ಜನಪದ ಲಾವಣಿ, ಕಥನ ಗೀತೆಗಳ ಮೂಲಕ ನಮಗೆ ದೊರೆಯುತ್ತವೆ. ಬೇರೆ ಪ್ರಕಾರದ ಕಥೆಗಳಂತೆ ಅತ್ಯಂತ ಪ್ರಾಚೀನ ಚಾರಿತ್ರಿಕ ಘಟನೆಗಳು ನಮಗೆ ಲಾವಣಿ/ಗೀತೆಗಳ ರೂಪದಲ್ಲಿ ದೊರೆಯುವುದು ವಿರಳ. ತೀರ ಇತ್ತೀಚಿನ 3–4 ಶತಮಾನಗಳಷ್ಟು ಇತ್ತೀಚಿನ ಚಾರಿತ್ರಿಕ ಘಟನೆಗಳು ನಮಗೆ ದೊರೆಯುತ್ತವೆ.

ಮತ್ತೊಂದು ವಿಶೇಷವೆಂದರೆ ನಮ್ಮ ನಾಡನ್ನು ಅನೇಕ ಪ್ರಸಿದ್ಧ ರಾಜಮನೆತನಗಳು ಆಳಿವೆ. ನಾಡಿನ ಗಡಿಯನ್ನು ದಕ್ಷಿಣದಿಂದ ಉತ್ತರದವರೆಗೂ ವಿಸ್ತರಿಸಿದ ಶ್ರೇಷ್ಠ ರಾಜರೂ ಆಳಿಹೋಗಿದ್ದಾರೆ. ಆದರೆ ನಮ್ಮ ಜನಸಾಮಾನ್ಯರ ಜನಮನದಲ್ಲಿ ಕಾವ್ಯವಾಗಿ

ಇವರ್‍ಯಾರು ಉಳಿದಿಲ್ಲ. ಉಳಿದಿರುವವರು ಸಣ್ಣಪುಟ್ಟ ಪಾಳೇಗಾರರು. ಸಾಮಂತ ರಾಜರು, ಸೈನಿಕರು. ಇಂತಹ ಸಣ್ಣ ಪುಟ್ಟ ಹುದ್ದೆಯಲ್ಲಿರುವವರು ಜನಪದರ ಮನಸ್ಸಿನಲ್ಲಿ, ನಾಲಿಗೆಯಲ್ಲಿ, ಕಾವ್ಯಗಂಗೆಯಾಗಿ ಹರಿದು ಬಂದಿದ್ದಾರೆ. ಇವರ್‍ಯಾರು ಜನರಿಂದ ದೂರ ಉಳಿದು ಅರಮನೆಯ ವೈಭೋಗದಲ್ಲಿ ವಾಸಿಸಿದವರಲ್ಲ. ಜನರ ಮಧ್ಯದಲ್ಲೇ ಜೀವಿಸಿದ್ದು, ಜನರ ನೋವಿಗೆ, ಅವರ ಸುಖ ದುಃಖಗಳಿಗೆ ದನಿಯಾಗಿ ಬಾಳಿದವರು. ಆದ್ದರಿಂದ ಇವರು ಚರಿತ್ರೆಯ ಪುಟಗಳಲ್ಲಿ ಕಾಣಿಸಿಕೊಳ್ಳದಿದ್ದರೂ ಸಹ ಜನಪದರ ನಾಲಿಗೆಯ ಮೇಲೆ ಶಾಶ್ವತ ಸ್ಥಾನಗಳಿಸಿದ್ದಾರೆ.

ಜಾನಪದ ಕೆಲವು ಸಂದರ್ಭದಲ್ಲಿ ಕರ್ನಾಟಕದ ಜನಪದ ವೀರಕಾವ್ಯಗಳಿಗೆ ಪ್ರೇರಣೆಯನ್ನು ನೀಡಿದ ಐತಿಹಾಸಿಕ ಸ್ಥಳಗಳಲ್ಲಿ ಚಿತ್ರದುರ್ಗ ಮುಖ್ಯವಾಗುತ್ತದೆ. ಹಳೇ ಮೈಸೂರು ಪ್ರಾಂತ್ಯದಲ್ಲಿ ಚಾರಿತ್ರಿಕ ಜನಪದ ಗೀತೆಗಳಿಗೆ ಚಿತ್ರದುರ್ಗ ಜಿಲ್ಲೆಯ ಕೊಡುಗೆ ಅಪಾರವಾದದ್ದು. ಅಲ್ಲದೆ ಈ ಜಿಲ್ಲೆಯಲ್ಲಿ ಪ್ರಾಚಾರದಲ್ಲಿರುವಷ್ಟು ಚಾರಿತ್ರಿಕ ಜನಪದ ಗೀತೆಗಳು ಬೇರೆ ಯಾವ ಜಿಲ್ಲೆಯಲ್ಲಿಯೂ ದೊರೆಯುವುದಿಲ್ಲ. ಚಿತ್ರದುರ್ಗದ ವೀರರನ್ನು ಕುರಿತಂತೆ ವಿಫುಲವಾದ ಜನಪದ ಗೀತೆಗಳು, ಕಥನಗೀತೆಗಳು, ಲಾವಣಿಗಳು, ಕೋಲಾಟ ಗೀತೆಗಳು ಮತ್ತು ಕಾವ್ಯಗಳು ಸೃಷ್ಟಿಯಾಗಿವೆ. "ಚಿತ್ರದುರ್ಗದಲ್ಲಿ ಪಾಳೇಗಾರರ ಆಳ್ವಿಕೆ ಆಗಿ ಹೋಗಿರುವುದರಿಂದ ಆ ಬಯಲು ಸೀಮೆ ಯಾವುದೇ ಗ್ರಾಮದಲ್ಲಿ ದೊರಕುವ ದೀರ್ಘ ಕಥಾನಕಗಳಿಂದ ಹಿಡಿದು ಪುಡಿ ಗೀತೆಗಳವರೆಗೆಲ್ಲ ಕಳೆದ ಇತಿಹಾಸದ ಅಸ್ಪಷ್ಟ ಗೆರೆಗಳು ಗೋಚರಿಸುತ್ತವೆ." ಚಿತ್ರದುರ್ಗದ ಪಾಳೇಗಾರರಿಗೆ ಸಂಬಂಧಿಸಿದ ಗೀತೆಗಳನ್ನು ಇಲ್ಲಿನ ಕೋಲಾಟಗಾರರು ಇಂದಿಗೂ ಜೀವಂತವಾಗಿರಿಸಿಕೊಂಡು ಬಂದಿರುವುದೇ ನಮ್ಮ ಭಾಗ್ಯ. ಚಿತ್ರದುರ್ಗದ ಪಾಳೇಗಾರರಿಗೆ

ಸಂಬಂಧಿಸಿದ ಜನಪದಗೀತೆ, ಲಾವಣಿ, ಕಥನಗೀತೆಗಳನ್ನು ಹಲವು ವಿದ್ವಾಂಸರು ಸಂಪಾದಿಸಿದ್ದಾರೆ. ಕ.ರಾ.ಕೃ ಅವರ 'ಚಿತ್ರಕಲ್ಲು ಮದಕರಿ,' ಚಿತ್ರದುರ್ಗದ ಮದಕರಿ ನಾಯಕನ ಗೀತೆಗಳು, ಪಾಳೇಗಾರರ ಪದಗಳು ಮುಖ್ಯವಾಗಿವೆ. ಹುಲ್ಲೂರು ಶ್ರೀನಿವಾಸ ಜೋಯಿಸರು 'ಪಾಳೇಗಾರರ ಜನಪದ ಗೀತೆಗಳು,' ಮಾಯಕೊಂಡದ ಲಡಾಯಿ, ಕೃಷ್ಣಮೂರ್ತಿ ಹಾನೂರರು ಜನಪದ ಸಾಹಿತ್ಯದಲ್ಲಿ ಚಿತ್ರದುರ್ಗ, ಜಿ.ಎಸ್.ದೀಕ್ಷಿತ್‌ರವರು ದೊಡ್ಡೆರಿಯ ಕಾಳಗ, ಮತ್ತಿಘಟ್ಟ ಕೃಷ್ಣಮೂರ್ತಿಯವರು ಪಾಳೇಗಾರರ ಕುರಿತಜನಪದ ಗೀತೆಗಳು ತುಂಬಾ ಮಹತ್ವದ ಕೃತಿಗಳಾಗಿವೆ. ದೊಡ್ಡೇರಿ ಕದನ ವಿವರಗಳನ್ನೊಳಗೊಂಡ ಲಾವಣಿ ಚಿತ್ತುರ್ದುಗದ ಚರಿತ್ರೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಈ ಕದನವು ನಡೆದದ್ದು ಬಿಚ್ಚುಗತ್ತಿ ಭರಮಣ್ಣನ ಕಾಲಘಟ್ಟದಲ್ಲಿ, ಮರಾಠರಿಗೂ ಮೊಘಲರಿಗೂ ಮೊದಲಿನಿಂದಲೂ ಪರಸ್ಪರ ದ್ವೇಷ. ಹಾಗಾಗಿ ಮರಾಠರು ಮೊಘಲರ ಗರ್ವವನ್ನು ಮುರಿಯಬೇಕೆಂದು, ಮೊಘಲರ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳನ್ನು ಲೂಟಿ ಮಾಡಿ ಅಪಾರ ಸಂಪತ್ತನ್ನು ದೋಚುತ್ತಿದ್ದರು. ಈ ಸಂದರ್ಭದಲ್ಲಿ ಸಂತೋಜಿ ಘೋರ್ಪಡೆ ಎಂಬ ಮರಾಠ ನಾಯಕ ಮೊಘಲರ ಆಳ್ವಿಕೆಗೆ ಒಳಪಟ್ಟ ಕರ್ನಾಟಕದ ಪ್ರದೇಶಗಳಲ್ಲಿ ಲೂಟಿ ಮಾಡಿ ಅದನ್ನು ಮೈಸೂರು ಭಾಗದ ಕೊಪ್ಪಳಕ್ಕೆ ಸಾಗಿಸುತ್ತಾನೆಂಬ ವರ್ತಮಾನ ಔರಂಗಜೇಬನಿಗೆ ತಿಳಿಯುತ್ತದೆ. ಆಗ ಔರಂಗಜೇಬ ತನ್ನ ಮೊಘಲ್ ಸರದಾರರೊಂದಿಗೆ ಸಿರಾದ್ ನವಾಬ ಖಾಸಿಂಖಾನ್‌ನನ್ನು ಸಂತೋಜಿ ಘೋರ್ಪಡೆಯನ್ನು ತಡೆದು ಅವನಲ್ಲಿನ ಅಪಾರ ಸಂಪತ್ತನ್ನು ಪುನಃ ವಶಪಡಿಸಿಕೊಳ್ಳಲು ಆಜ್ಞೆ ಹೊರಡಿಸುತ್ತಾನೆ. ಆಗ ಖಾಸಿಂಖಾನ್ ಮೊಘಲ್ ಸೇನೆಯೊಡನೆ ಸೇರಿ ಸಂತೋಜಿ ಬರುವ ಮಾರ್ಗದಲ್ಲಿ ಕಾದು ಕುಳಿತಿರುತ್ತಾನೆ. ಚಳ್ಳಕೇರಿ ಸಮೀಪ ದೊಡ್ಡೇರಿಯಲ್ಲಿ ಈ ಎರಡು ಸೇನೆಗಳು ಮುಖಾಮುಖಿಯಾಗುತ್ತವೆ. ನಾಲ್ಕು ದಿನಗಳ ಕಾಲ ಯುದ್ಧ ಜರುಗುತ್ತದೆ. ಈ ಯುದ್ಧದಲ್ಲಿ ಚಿತ್ರದುರ್ಗದ ಭರಮಣ್ಣ ನಾಯಕ

ಮರಾಠರ ಪರವಾಗಿ ಹೋರಾಡಿ ಜಯ ಗಳಿಸಿಕೊಡುತ್ತಾನೆ. ಈ ವಿವರಗಳು ಮರಾಠ ಸಾಹಿತ್ಯದಿಂದ, ಪಾರ್ಸಿ ದಾಖಲೆಗಳಿಂದ ದೊರೆಯುತ್ತದೆ. ಚಿತ್ರದುರ್ಗ ಪಾಳೇಗಾರರ ವಂಶಾವಳಿಯನ್ನು ಹೇಳುವಾಗ ಇವರ ಬಗ್ಗೆ ಸ್ವಲ್ಪ ಮಾತ್ರವೇ ಪ್ರಸ್ತಾಪಿಸಲಾಗಿದೆ. ಆದರೆ ದೊಡ್ಡೇರಿ ಕಾಳಗದ ಲಾವಣಿ ಈ ಬಗ್ಗೆ ಹಲವು ಮಹತ್ವದ ಸಂಗತಿಗಳನ್ನು ಹೊರಹೊಮ್ಮಿಸುತ್ತದೆ.

ಈ ಲಾವಣಿ ಭರಮಣ್ಣ ನಾಯಕನ ಪೌರಷವನ್ನು, ವೀರತ್ವವನ್ನು, ವರ್ಣಿಸುವ ಉದ್ದೇಶದಿಂದ ರಚಿತಗೊಂಡಿದೆ. ಈ ಯುದ್ಧ ನೇರವಾಗಿ ಮೊಘಲರಿಗೂ ಮತ್ತು ಮರಾಠರಿಗೂ ನಡೆದದ್ದು. ಚಿತ್ರದುರ್ಗದವರು ಯುದ್ಧದ ನಾಲ್ಕನೆ ದಿನ ಇದರಲ್ಲಿ ಸೇರಿಕೊಂಡರೆಂದು ಕೆಲವು ದಾಖಲೆಗಳು ಸ್ಪಷ್ಟಪಡಿಸುತ್ತವೆ. ಅಲ್ಲದೆ ಭರಮಣ್ಣ ನಾಯಕ ಮತ್ತು ಅವನ ಮಗ ಹಿರೇ ಮದಕರಿ ನಾಯಕರು ಯುದ್ಧದಲ್ಲಿ ಭಾಗವಹಿಸಿದ್ದಾರೆಂದು ದಾಖಲೆಗಳು ಉಲ್ಲೇಖವಿದೆ. ಆದರೆ ಈ ಲಾವಣಿಯಲ್ಲಿ ಮರಾಠರ ಪ್ರಸ್ತಾಪವಿರುವುದಿಲ್ಲ.

*"ಖಾಶಂಖಾನ*
*ಶಂಕರನಾರಾಯಣಕಂಚಿಯಲ್ಲಿಬ್ಬರೂ ಬೇಟಿ ಆಗಿ*
*ಹಗೆಯವನ ಮೇಲೆ ಹಣವಿಗೆ ಹೋಗುತ್ತೇನೆ। ಪಗದೀಗೆ ಹೋಗುತ್ತೇನೆ ।*
*ದುರ್ಗದ ವಜೀರನ ದಾರಿಬಿಡೆಂದಾ।"*

ಇಲ್ಲಿ ಖಾಸಿಂಖಾನ್ ಮತ್ತು ಶಂಕರನಾರಾಯಣರು ಕಂಚಿಯಲ್ಲಿ ಬೇಟಿಯಾಗಿದ್ದರ ಉಲ್ಲೇಖವಿದೆ. ಆದರೆ ಯಾವ ಚಾರಿತ್ರಿಕ ದಾಖಲೆಗಳಲ್ಲಿಯೂ ಇದರ ಬಗ್ಗೆ ಮಾಹಿತಿ ಇಲ್ಲ. ಇಲ್ಲಿ ಮರಾಠರ ಪ್ರಸ್ತಾಪವನ್ನು ಮಾಡಿರುವುದಿಲ್ಲ. ಖಾಸಿಂಖಾನ್ ದುರ್ಗದ ಗಡಿಯಲ್ಲಿ ಬಂದುದಾರಿ ಕೇಳಿದ್ದರಿಂದ ಭರಮಣ್ಣನ ಅಧಿಕಾರಿಗುಂಟನೂರು ಮಲ್ಲಣ್ಣ ಅವರಿಗೆ ದಾರಿಯನ್ನು ನೀಡದೆ ದುರ್ಗದ ದೊರೆಗೆ ಓಲೆಯನ್ನು ಕಳುಹಿಸುತ್ತಾನೆ. ಭರಮಣ್ಣ ನಾಯಕನನ್ನು ಬೆಂಕಿ ಭರಮೇಂದ್ರ ಎಂದು ಸಂಬೋಧಿಸಲಾಗಿದೆ. ಅದರ ವಿವರಗಳು ಹೀಗಿವೆ–

*"ಬಂಥಥ ಓಲೆಯನು ಕುಂತೊಮ್ಮೆ ಓದಿಸಿ,*
*ನಿಂತೋಮ್ಮೆ ಓದಿಸಿ ।*
*ಐಯ್ಯಯ್ಯೊಥಗಡಿ ನೀ ಹೋಕ್ಕಲ್ಲಿ ಬಿಡೆನು*
*ಹೊಸದುರ್ಗ ಮಂದಿ । ಹೊಳಲ್ಕೆರೆ ಠಾಣ್ಯವು*
*ಸಂತೆಬೆನ್ನೂರು ಮಂದಿ ಮುಂಚೆ ಬರಲೆಂದಾ*
*ಹಾರಿಸುವೋ ವುಡಾಸವೊ ಪಾವಡ । ಬೀಸೋ ಬೀಸಣಿಗೆ*
*ವಂಕಿನ ಮಲ್ಲಿಗೆ । ಚಿನ್ನದ ಕಾಸಿ ।*
*ಕತ್ತರಿ ಬಾಕು ಕೈಲಿ ಕಠಾರಿ । ಇಟ್ಟ ಭಂಡಾರ ವಿಭೂತಿ ಭಸ್ಮಾಂಗ*
*ಕಟ್ಟಿಕನ ಸಣ್ಣಗಂಬಳಿ । ಬುರುಡೆ ಹಡಪದ ಸಂಚಯವು"*

ಹೀಗೆ ತಯಾರಾದ ಸೈನ್ಯ ದೊಡ್ಡೇರಿಯ ಕಡೆಗೆ ಯುದ್ಧಕ್ಕೆ ಹೊರಟಿತು. ದೊಡೇರಿಯ ಕೋಟೆಯ ಒಳಗಡೆ ಅಡಗಿದ್ದ ಖಾಸಿಂನ ದಂಡನ್ನು ಮುತ್ತಿದರು. ಈ ಯುದ್ಧ ಮಧ್ಯಾಹ್ನದ ರಣಬಿಸಿಲಿನಲ್ಲಿ ನಡೆದಿರಬೇಕು ಆದ್ದರಿಂದ ಅದರ ವರ್ಣನೆಯೂ ಇಲ್ಲಿ ಬಂದಿದೆ.

*"ಮಟ ಮಟ ಮಧ್ಯಾಹ್ನ । ಚಟನೆಕಾಯುವ ಬಿಸಿಲಾಗೆ*
*ನೆಗ್ಗಲ ಮುಳ್ಳಾಗೆ, ಕಂಚಿ ಕಾಟ್ಯಾಗೆ*
*ಹಿಂದಕ್ಕೊದಿತು ಖಾಸಿಂಖಾನನ ದಂಡು ।"*

ಮಧ್ಯಾಹ್ನದ ರಣಬಿಸಿಲಿನಲ್ಲಿ ಕಾಳಗ ಜೋರಾಗಿ ಸಾಗಿ ದುರ್ಗದವರ ಕೈ ಮೇಲಾಗಿ ಖಾಸಿಂನ ಸೈನ್ಯ ದಿಕ್ಕೆಟ್ಟು ಹೋಡಲಾರಂಭಿಸಿತು. ದುರ್ಗದವರ ಹೊಡೆತ ತಾಳಲಾರದೆ ಖಾಸಿಂಖಾನ ಸೈನಿಕರು ಮಾರುವೇಷದಲ್ಲಿ ತಪ್ಪಿಸಿಕೊಳ್ಳಲು ಪ್ರಾರಂಭಿಸಿದರು. ಅದರ ವಿವರಣೆ ಈ ಕೆಳಗಿನಂತಿದೆ.

*"ಹೊದ್ದು ಗುಡಾರವ ಹೊಕ್ಕು ಕಡಿವಾಗ*
*ಬಣಜಿಗರು ಕಾಣಪ್ಪ ಬೆಳ್ಳುಳ್ಳಿ ಮಾರುವವರು । ಕಟ್ಟೆಯ ಮೇಲೆ*
*ಓಡಿಸಿ ಕಡಿವಾಗ ಗದಮಿಕೊಂಡು ಕಡಿವಾಗ*

*ವಕ್ಕಲಿಗರು ಕಾಣಪ್ಪ ಬಿಟ್ಟಿಯ ಬಂದಿವಿ ।*
*ಏರಿಯಾ ಹಿಂದೆ ಹಾರಾಡಿ ಕಡಿವಾಗ*
*ಹೋರಾಕಿ ಕಡಿವಾಗ । ಬ್ಯಾಡರುಕಣಪ್ಪ*
*ನಾವು ಬ್ಯಾಟಿಯಾ ಬಂದಿವಿ."*

ಮೇಲಿನ ಲಾವಣಿಯ ಸಾಲುಗಳು ಚಿತ್ರದುರ್ಗದವರ ಪರಾಕ್ರಮವನ್ನು ವರ್ಣಿಸುತ್ತದೆ. ದುರ್ಗದವರ ಎದುರು ನಿಂತು ಯುದ್ಧ ಮಾಡಲಾರದೆ ಶತ್ರು ಸೈನ್ಯದವರು ವ್ಯಾಪಾರಿಗಳು, ರೈತರು, ಬೇಡರ, ವೇಷಗಳನ್ನು ಹಾಕಿಕೊಂಡ ಇವರಿಂದ ಪ್ರಾಣರಕ್ಷಣೆಗಾಗಿ ಪರಾದಾಡುವಂತ ಸನ್ನಿವೇಶ ಎದುರಾಗುತ್ತದೆ. ದುರ್ಗದ ಸೈನಿಕರು ಶಿರಾದ ಸೈನಿಕರ ಮೇಲೆ ಇಷ್ಟೊಂದು ರೋಷದಿಂದ ಹೋರಾಡಲು, ಶಿರಾದವರು ಆಗಾಗ ದುರ್ಗದವರಿಗೆ ವಿಪರೀತ ತೊಂದರೆ ಕೊಟ್ಟಿರಬಹುದೆಂದು ಊಹಿಸಬಹುದಾಗಿದೆ. ಗೂಡಾರದಲ್ಲಿದವರನ್ನು ಸಹ ಬಿಡದೆ ಕಡಿಯುವಷ್ಟು ದ್ವೇಷ ಅವರ ಮೇಲಿದ್ದಿತು. ಈ ಲಾವಣಿ ಯುದ್ಧ ಸಂದರ್ಭದಲ್ಲಿ ಜರುಗಿದ ಇಂಥ ಸ್ವಾರಸ್ಯಕರ ಸಂಗತಿಗಳನ್ನು ದಾಖಲಿಸುತ್ತದೆ. ಈ ಲಾವಣಿಯ ಮತ್ತೊಂದು ಮಹತ್ವದ ಅಂಶವನ್ನು ವಿವರಿಸುತ್ತದೆ.

*"ಶಿಟ್ಟಿನಾ ದೊರೆಕೈಯಾಗೆ । ಸಿಕ್ಕಬಾರದೆಂದೂ ।*
*ದಕ್ಕಬಾರದೆಂದೂ । ಹಕ್ಕೊಜಿನಾಮೆಕುಡಿದು*
*ಡೇರಾದ ವಳಗೆ ಸತ್ತಿದ್ದಾ"*

ಇದು ಶಿರಾದ ನವಾಬ ಖಾಸಿಂಖಾನನ ಸಾವನ್ನು ಕುರಿತು ಹೇಳುವ ಸಾಲುಗಳು. ಆದರೆ ಮರಾಠರ ಸಾಹಿತ್ಯದಲ್ಲಿ ಖಾಸಿಂಖಾನ್‌ನು ಮಾದಕ ವಸ್ತುವಾದ ಅಫೀಮಿನ ಗುಲಾಮನಾಗಿದ್ದ. ಮೂರು ದಿನಗಳ ಕಾಲ ಭೀಕರ ಯುದ್ಧದಿಂದ ಅವನಿಗೆ ಅಫೀಮು ಎಲ್ಲಿಯೂ ದೊರಕದಾದಿತು. ಇದರಿಂದ ಖಾಸಿಂಖಾನ್ ಸತ್ತ ಎಂದು ದಾಖಲೆಗಳಲ್ಲಿ ಉಲ್ಲೇಖಿಸಲಾಗಿದೆ. ಆದರೆ ಈ ಲಾವಣಿ ಖಾಸಿಂಖಾನನು ಜೌರಂಗಜೇಬನಂತಹ ಕ್ರೂರ ಮೊಘಲ ದೊರೆಯ ಕೈಗೆ ಸಿಕ್ಕಬಾರದು ಎಂದು ಬಗೆದು ತನ್ನ ಡೇರೆಯಲ್ಲಿ ಹಕ್ಕೊಜಿನಾಮೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಎಂದು ತಿಳಿದು ಬರುತ್ತದೆ. ಪಾರ್ಸಿ ದಾಖಲೆಗಳಲ್ಲಿ ಯುದ್ಧದಲ್ಲಿ ಸೋತ ಖಾಸಿಂಖಾನನು ಔರಂಗಜೇಬನಿಗೆ ಮುಖ ತೋರಿಸಲಾರದೇ ಆತ್ಮಹತ್ಯೆ ಮಾಡಿಕೊಂಡ. ಇವನ ಸಾವಿನ ಬಗ್ಗೆ ಅನುಕಂಪ ಹೊಂದಿದ್ದ ಔರಂಗಜೇಬ ಅವನ ಕುಟುಂಬಕ್ಕೆ ರಕ್ಷಣೆ ಒದಗಿಸಿದ ಎಂದು ಹೇಳಿದೆ.

ಒಟ್ಟಿನಲ್ಲಿ ದೊಡ್ಡೇರಿ ಕದನದ ಸ್ವಾರಸ್ಯವನ್ನು ಹೇಳುವ ಈ ಲಾವಣಿ ಚಿತ್ರದುರ್ಗದ ನಾಯಕ ಭರಮಣ್ಣ ನಾಯಕನ ಪರಾಕ್ರಮವನ್ನು ಹೇಳಲು ರಚಿತವಾಗಿದೆ. ಈ ಲಾವಣಿ ದುರ್ಗದ ಚಾರಿತ್ರಿಕ ದಾಖಲೆಗಳಲ್ಲಿ ಉಲ್ಲೇಖವಿರದ ಹಲವು ಸ್ವಾರಸ್ಯಕರ ಸಂಗತಿಗಳನ್ನು ಅನಾವರಣಗೊಳಿಸಿದೆ. ಈ ಮೂಲಕ ದಕ್ಷಿಣ ಭಾರತದಲ್ಲಿ ಚಿತ್ರದುರ್ಗದವರ ಪ್ರಾಬಲ್ಯವನ್ನು ಈ ಯುದ್ಧ ಸಾರುತ್ತದೆ. ಈ ಯುದ್ಧದಿಂದ ಮೊಘಲ್ ಸಾಮ್ರಾಟ ಔರಂಗಜೇಬನಿಗೆ ಕರ್ನಾಟಕದ ದಕ್ಷಿಣ ಭಾಗದಲ್ಲಿ ಬಾರಿ ಹಿನ್ನಡೆಯಾಯಿತು. ಮರಾಠರಿಗೆ ಮೊಘಲರ ಮೇಲೆ ಪ್ರಾಬಲ್ಯ ಮೆರೆದ ಕೀರ್ತಿ ಸಲ್ಲುತ್ತದೆ. ಚಿತ್ರದುರ್ಗ ಈ ಯುದ್ಧದಿಂದ ಇಲ್ಲಿನ ಇತರೆ ಸ್ಥಳಿಯ ಸಂಸ್ಥಾನಿಕರ ಎದುರು ತನ್ನ ಶಕ್ತಿ ಸಾಮಾರ್ಥ್ಯಗಳನ್ನು, ಘನತೆಯನ್ನು ಹೆಚ್ಚಿಸಿಕೊಂಡಿತು. ಕರ್ನಾಟಕದ ಸಣ್ಣ ಪಾಳೇಪಟ್ಟದ ಚಿತ್ರುದುರ್ಗ ಎರಡು ಪ್ರಬಲ ರಾಜಕೀಯ ಶಕ್ತಿಗಳ ಜೊತೆಗೆ ಗುರುತಿಸಿಕೊಂಡದ್ದು, ದಕ್ಷಿಣ ಭಾರತದಲ್ಲಿ ಯಾರು ಪ್ರಬಲರು ಎಂದು ನಿರ್ಣಯಿಸುವ ಈ ಯುದ್ಧದಲ್ಲಿ ತಾವು ನಿರ್ಣಾಯಕರಾದದ್ದು, ಈ ಯುದ್ಧದ ವಿಶೇಷತೆಯಾಗಿದೆ. ಆದ್ದರಿಂದ ಈ ಯುದ್ಧದ ವಿವರಗಳನ್ನೊಳಗೊಂಡಿರುವ ಈ ಲಾವಣಿಯು ಚಿತ್ರುದುರ್ಗದ ಚರಿತ್ರೆಯಲ್ಲಿ ವಿಶೇಷವಾದ ಸ್ಥಾನವನ್ನು ಪಡೆದಿದೆ. ಈ ಲಾವಣಿಯನ್ನು ಮೊದಲು ಗುರುತಿಸಿದವರು ಹುಲ್ಲೂರು ಶ್ರೀನಿವಾಸ ಜೋಯಿಸರು. ನಂತರ ಇವರು ಪ್ರಸಿದ್ಧ ಇತಿಹಾಸಕಾರ ಪ್ರೊ.ಜಿ.ಎಸ್.ದೀಕ್ಷಿತ್‌ರೊಡನೆ ಸೇರಿಕೊಂಡು ದೊಡ್ಡೇರಿಯಲ್ಲಿ 1954ರಲ್ಲಿ ಈ

ಲಾವಣಿಯನ್ನು ಸಂಗ್ರಹಿಸಿದರು. ಈ ಲಾವಣಿಯನ್ನು 1979 ರಲ್ಲಿ ಪ್ರೊ.ಜಿ.ಎಸ್.ದೀಕ್ಷಿತರು 'ದೊಡ್ಡೇರಿಯ ಕಾಳಗ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಈ ಲಾವಣಿಯ ರಚನೆಕಾರನ ಹೆಸರು ಸಂಪಿಗೆ ಸಿದ್ದನ ವರಕುಮಾರ ಎಂದು ಇರುವುದರಿಂದ ಇದು ಜನಪದ ಕವಿಯ ನಿಜನಾಮವಾಗಿರದೆ ಕಾವ್ಯ ನಾಮವಾಗಿರಬೇಕು ಎಂದು ಪ್ರೊ.ಜಿ.ಎಸ್.ದೀಕ್ಷಿತ್‌ರವರು ಅಭಿಪ್ರಾಯಪಟ್ಟಿದ್ದಾರೆ.

**ಪರಾಮರ್ಶನ ಗ್ರಂಥಗಳು:**


- ಹುಲ್ಲೂರು ಶ್ರೀನಿವಾಸ ಜೋಯಿಸ್‌ಮತ್ತು ಜಿ.ಎಸ್.ದೀಕ್ಷಿತ್. (1954). *ದೊಡ್ಡೇರಿಯ ಕಾಳಗ*
- ಲಕ್ಷ್ಮಣ್ ತೆಲಗಾವಿ. (2020). *ದೊಡ್ಡೇರಿ ಕದನ: ಚರಿತ್ರೆ ಮತ್ತು ಜಾನಪದ ನೆಲೆಯಲ್ಲಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಲಕ್ಷಣ ತೆಲಗಾವಿ (2013). *ಜನಪದ ಕಥನ ಗೀತೆ 'ದೊಡ್ಡೇರಿಯ ಕಾಳಗ': ಪುನರಧ್ಯಯನ.* ಕರ್ನಾಟಕ ಇತಿಹಾಸ ಅಕಾಡೆಮಿ.
- ಲಕ್ಷ್ಮಣ್ ತೆಲಗಾವಿ. (2005). ದೊಡ್ಡೇರಿ ಕನದ : ಚಿತ್ರದುರ್ಗ ಚರಿತ್ರೆಯ ರೋಚಕ ಅಧ್ಯಾಯ. *ಚರಿತ್ರೆ ಅಧ್ಯಯನ, 1(1).*130–148.